ಬೂರುಗವೇ ಚಿಗುರಿ, ಎಲೆಗಳ ಗುಂಪಿನಿಂದ ದಟ್ಟವಾಗಿದ್ದಂತೆ ಭಾಸವಾಗುತ್ತಿತ್ತು. ಇದು ನಾಗವರ್ಮ ಬಿಡಿಸಿರುವ ಶಬ್ದ ಚಿತ್ರ. ಮೂಲ ಪಠ್ಯದಲ್ಲಿ ಬಾಣನು ವಿಪುಲವಾದ ದೃಶ್ಯ ಜಗತ್ತನ್ನು ತೆರೆದಿಟ್ಟು ಸಸ್ಯರಾಜಿ, ಪ್ರಾಣಿಸಂಕುಲದ ಸಹಜಸಂಬಂಧವನ್ನು ಅನನ್ಯವಾಗಿ ವರ್ಣಿಸಿದ್ದಾನೆ. ಅವನ ಸೃಜನಶೀಲ ಪ್ರತಿಭೆ ಅತಿಶಯೋಕ್ತಿಯನ್ನೂ ವಾಸ್ತವವಾಗಿ ತೋರಿಸುತ್ತದೆ. ಇಂಥ ಸನ್ನಿವೇಶಗಳು ನಾಗವರ್ಮನ ಕುಂಚದಿಂದ ಅಪೂರ್ವವಾಗಿ ಮೂಡಿನಿಂತಿವೆ.

ಗಿಳಿಯು ಹೇಳುವ ಕತೆ ಒಂದು ಸಾದೃಶ್ಯದ ಹಾಗೆ ಕಾಣಬರುತ್ತದೆ. ಕವಿ ತನ್ನ ವೈಯಕ್ತಿಕ ಬದುಕಿನಲ್ಲಿ ಮಾತಾಪಿತೃವಿಯೋಗದಿಂದ ಅನುಭವಿಸಿದ ಅಳಲನ್ನು ಗಿಳಿಯ ಪೂರ್ವವೃತ್ತಾಂತದ ಮೂಲಕ ಹೇಳಿಕೊಂಡಿರುವಂತೆ ತೋರುತ್ತದೆ. ಜೀವನದ ಆರಂಭಿಕ ದೆಸೆಯಲ್ಲಿ ತಬ್ಬಲಿತನದಿಂದ ದಿಕ್ಕು ತಪ್ಪಿದ ನೆನಪುಗಳು ಅವನನ್ನು ಕಾಡಿರಬೇಕು! ಬೂರುಗದ ಪೊಟರೆಯಲ್ಲಿ ವಾಸವಿದ್ದ ಮುದಿಗಿಳಿ, ತಾಯಿಯನ್ನು ಕಳೆದುಕೊಂಡ ತನ್ನ ಮರಿಯನ್ನು ಸಾಕುವ ರೀತಿಯಿದು: 'ಪಕ್ಕಿಗಳಲ್ಲಿ ತಿಂದುೞಿದ ನೆಲ್ಲಳನುಚ್ಚುಗಳಂ ಫಲಗಳಂ ಪಕ್ಕದೊಳಿರ್ದ ಗೂಡುಗಳಿನಾಯ್ದೆನಗಿಕ್ಕುವನಟ್ಟೞಿಂದೆ ತಾಂಮಿಕ್ಕುದನುಂಡಪಂ'. ಅಕ್ಕ ಪಕ್ಕದ ಪಕ್ಷಿಗಳು ತಿಂದು ಉಳಿದುದನ್ನು ತಂದು ಮರಿಗೆ ತಿನ್ನಿಸಿ, ಮಿಕ್ಕಿದ್ದನ್ನು ತಾನು ತಿನ್ನುತ್ತದೆ. ಹೀಗಿರುವಾಗ ಒಮ್ಮೆ ಬೇಡರ ಪಡೆ ಕಾಡಿಗೆ ಮುತ್ತಿಗೆ ಹಾಕುತ್ತದೆ. ಬೆಟ್ಟಗಳು ಪ್ರತಿಧ್ವನಿಸುವಂತೆ, ವಿಂಧ್ಯಪರ್ವತವೇ ಅಲ್ಲಾಡುವಂತೆ ಅಲ್ಲೋಲ ಕಲ್ಲೋಲವಾಗುತ್ತದೆ. ಸಲಗಗಳ ಚೀರಾಟ, ಹಕ್ಕಿಗಳ ಕೋಲಾಹಲ ಧ್ವನಿ, ಜಿಂಕೆ–ಹಂದಿ–ಕಾಡುಕೋಣಗಳ ಕೂಗಾಟ, ಸಿಂಹಗಳ ಗರ್ಜನೆ, ಗೇಂಡಾಮೃಗಗಳ ಆಕ್ರಂದನ ಎಲ್ಲ ಕಡೆ ವ್ಯಾಪಿಸುತ್ತಿದೆ. ಇವೆಲ್ಲವನ್ನೂ ಪ್ರತ್ಯಕ್ಷದರ್ಶಿಯಂತೆ ಕವಿ ವರ್ಣಿಸಿದ್ದಾನೆ. ಇವು ಓದುಗರ ಕಣ್ಣೆದುರಿಗೇ ಬಂದು ನಿಲ್ಲುವಂಥ ಚಿತ್ರಗಳು. ಪ್ರಾಣಿಗಳು ಒಂದೇ ಸಮನೆ ಓಡಿರುವ ದಾರಿಗಳಲ್ಲಿ ಕೆಸರು ಎರಚಾಡಿದೆ. ಮುನ್ನುಗ್ಗಿ, ಹೊಡೆ, ಬೆನ್ನಟ್ಟು, ಸೀಳುನಾಯಿಗಳನ್ನು ಬಿಡು, ಬಾಣವನ್ನು ಹೂಡು–ಮುಂತಾದ ಬೇಡರ ಆರ್ಭಟ ಹೆಚ್ಚುತ್ತಿದೆ. ಸಿಂಹದ ಹೆಜ್ಜೆಗುರುತುಗಳು ರಕ್ತದಿಂದ ಕಾಗದವನ್ನು ಬರೆದಿಟ್ಟಿರುವಂತೆ ಕಾಣುತ್ತಿವೆ. ಆನೆಯ ತಲೆಯಿಂದ ಉದುರಿದ ಮುತ್ತುಗಳು ಹಾದಿಯನ್ನು ತೋರಿಸುತ್ತಿವೆ:

ಬರೆದರೊ ಪತ್ರಮನೆಂಬಂ।ತಿರೆಪಜ್ಜೆಗಳೆಸೆಯೆ ನಾಂದುನೆತ್ತರೊಳೆತ್ತಂ
ಕರಿಮಸ್ತಕ ಮೌಕ್ತಿಕದಂ।ತುರವೀದಿಯ ತೋಱಿದಪುದು ಮೃಗಪತಿಮಾರ್ಗಂ

ಹೀಗಿರುವಾಗ, ಮುದಿಗಿಳಿ ತೊಡೆಗಳ ಮಧ್ಯದಲ್ಲಿ ಮರಿಯನ್ನು ಇರುಕಿಸಿಕೊಂಡು, ಹರಡಿದ ರೆಕ್ಕೆಗಳಿಂದ ಮುಚ್ಚಿ, ಪುತ್ರವ್ಯಾಮೋಹದಿಂದ ಮರುಗುತ್ತಿರುತ್ತದೆ. ಸ್ವಲ್ಪವೂ ದಯೆಯಿಲ್ಲದೆ ಬೇಡ ಅದರ ಕೊರಳನ್ನು ಮುರಿದು, ಪ್ರಾಣ ಹೋಗಿ ಕತ್ತು ಜೋಲಾಡುತ್ತಿರುವ ಅದನ್ನು ನೆಲಕ್ಕೆ ಬಿಸಾಡುತ್ತಾನೆ; ರೆಕ್ಕೆಯೊಳಗಿದ್ದ ಗಿಳಿ ಬೇಡನ ಕಣ್ಣಿಗೆ ಬೀಳದೆ, ದೂರ ಸಿಡಿದು ತರಗೆಲೆಯ ರಾಶಿಯಲಿ ಬಿದ್ದು ಉಳಿದುಕೊಂಡಿತು. ಕೊನೆಗೆ ಜಾಬಾಲಿ ಮುನಿಯ ಮಗ ಹಾರೀತನಿಂದ ಉಪಚರಿಸಲ್ಪಟ್ಟು ಆಶ್ರಮವನ್ನು ಸೇರುತ್ತದೆ.

ಕಾದಂಬರಿ ಕತೆಯ ಎರಡನೆಯ ವಕ್ತೃ ಜಾಬಾಲಿ ಋಷಿ. ಹಾರೀತನು ತಂದ ಗಿಳಿಯನ್ನು ಕಂಡು 'ಈತಂ ಮುನ್ನಿನ ಭವದೊಳ್।ನೀತಿಯನುೞಿದೆಸಗಿ ಮೋಹದಿಂದಂ ತಿರ್ಯ।ಗ್ಜಾತಿಗೆ ಬೞಿಸ್ಲೋರಂದದಿ।ನೀ ತೆಱದಿಂ ಕರ್ಮಫಲವನುಂಡಪನಲ್ತೇ' ಎಂದು ನುಡಿಯುತ್ತಾನೆ. ಆಶ್ರಮದ ಮುನಿ ಸಮೂಹ ಗಿಳಿಯ ಜನ್ಮರಹಸ್ಯವನ್ನು ತಿಳಿಯಲು ಉತ್ಸುಕವಾಗುತ್ತದೆ. ಜಾಬಾಲಿ ಹೇಳುವ ಗಿಳಿಯ ಪೂರ್ವಜನ್ಮ ವೃತ್ತಾಂತದೊಂದಿಗೆ ಕತೆಯ ಮುಖ್ಯ ಹಂದರ ನಿರ್ಮಾಣವಾಗುತ್ತದೆ.